**ಪೊಲೀಸ್ ಅಧೀಕ್ಷಕರ ಕಛೇರಿ, ಬೆಂಗಳೂರು ಜಿಲ್ಲೆ.**

**ಪತ್ರಿಕಾ ಪ್ರಕಟಣೆ**

ದಿನಾಂಕ 22/08/2026.

**ದೊಡ್ಡಬಳ್ಳಾಪುರ ಟೌನ್ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಅಂತರಾಷ್ಟ್ರೀಯ ಗ್ಯಾಂಗಸ್ಟರ್ ಜೊತೆಯಲ್ಲಿ ಇನ್‌ಸ್ಟಾಗ್ರಾಂ ಸಾಮಾಜಿಕ ಜಾಲತಾಣದ ಮೂಲಕ ಸಂಪರ್ಕ ಹೊಂದಿದ್ದ ಆರೋಪಿಯ ಬಂಧನ.**

ದಿನಾಂಕ 20/08/2026 ರಂದು ಬೆಳಿಗ್ಗೆ 11–00 ಗಂಟೆಯಲ್ಲಿ ದೊಡ್ಡಬಳ್ಳಾಪುರ ಉಪವಿಭಾಗದ, ದೊಡ್ಡಬಳ್ಳಾಪುರ ಟೌನ್ ಪೊಲೀಸ್ ಠಾಣೆಯ ಗುಪ್ತ ಮಾಹಿತಿ ಸಿಬ್ಬಂದಿ ಶ್ರೀ ರೂಪೇಶ್‌ಯಾದವ್ ರವರು ದೊಡ್ಡಬಳ್ಳಾಪುರ ಟೌನ್ ಪೊಲೀಸ್ ಠಾಣೆ ಸರಹದ್ದಿನ ಇಸ್ಲಾಂಪುರದಲ್ಲಿ ಗುಪ್ತ ಮಾಹಿತಿ ಸಂಗ್ರಹಿಸುತ್ತಿದ್ದಾಗ, ಪೊಲೀಸ್ ಭಾತ್ಮೀದಾರರ ಮೂಲಕ ಇಸ್ಲಾಂಪುರ ವಾಸಿ ಸಯ್ಯದ್ ಅಬೂಬಕರ್ ಎಂಬುವವರು ಸಮಾಜಘಾತುಕ ಹಾಗೂ ಅಂತರಾಷ್ಟ್ರೀಯ ಗ್ಯಾಂಗ್‌ಸ್ಟರ್ ವ್ಯಕ್ತಿಯೊಂದಿಗೆ ಇನ್‌ಸ್ಟಾಗ್ರಾಂ ಜಾಲತಾಣದಲ್ಲಿ ಸಂಪರ್ಕ ಹೊಂದಿರುವ ಬಗ್ಗೆ ಮಾಹಿತಿ ತಿಳಿದು ಬಂದಿದ್ದು, ಖಚಿತ ಮಾಹಿತಿ ಮೇರೆಗೆ ಸಯ್ಯದ್ ಅಬೂಬಕರ್ ಎಂಬುವವರನ್ನು ಠಾಣೆಗೆ ಕರೆತಂದು ಸದರಿ ವ್ಯಕ್ತಿಯ ವಿರುಧ್ಧ ಪ್ರಕರಣ ದಾಖಲಿಸುವಂತೆ ನೀಡಿದ ದೂರಿನಂತೆ ದೊಡ್ಡಬಳ್ಳಾಪುರ ಟೌನ್ ಪೊಲೀಸ್ ಠಾಣೆಯಲ್ಲಿ ಸಯ್ಯದ್ ಅಬೂಬಕರ್ ಎಂಬುವವರ ವಿರುದ್ಧ ಬಿ.ಎನ್.ಎಸ್ ಕಾಯ್ದೆಯ ವಿವಿಧ ಕಲಂಗಳ ಅಡಿಯಲ್ಲಿ ಪ್ರಕರಣ ದಾಖಲಿಸಿಕೊಂಡಿದ್ದು, ಕೇಸಿನ ಆರೋಪಿತನಾದ **ಸಯ್ಯದ್ ಅಬೂಬಕರ್ S/O ಸಯ್ಯದ್ ಶಫಿಉಲ್ಲಾ, 25 ವರ್ಷ, ಎ.ಸಿ.ಟೆಕ್ನಿಷಿಯನ್ ಕೆಲಸ, ವಾಸ– ಇಸ್ಲಾಂಪುರ, ದೊಡ್ಡಬಳ್ಳಾಪುರ ಟೌನ್** ಎಂಬುವವರನ್ನು ದಸ್ತಗಿರಿ ಮಾಡಿ ನ್ಯಾಯಾಂಗ ಬಂಧನಕ್ಕೆ ಒಳಪಡಿಸಿರುತ್ತದೆ.

ಸದರಿ ಸಯ್ಯದ್ ಅಬೂಬಕರ್ ಎಂಬ ವ್ಯಕ್ತಿ ಸಾಮಾಜಿಕ ಜಾಲತಾಣವಾದ instagram ನಲ್ಲಿ Hammadmemon333 ಹೆಸರಿನ ವ್ಯಕ್ತಿಯೊಂದಿಗೆ ಸಂಪರ್ಕ ಹೊಂದಿದ್ದ ಬಗ್ಗೆ ಹೆಚ್ಚಿನ ತನಿಖೆ ಮುಂದುವರೆದಿದೆ.

**ಸಹಿ/–**
**ಶ್ರೀ ಎಂ.ವಿ.ಚಂದ್ರಕಾಂತ್, ಐ.ಪಿ.ಎಸ್**
**ಪೊಲೀಸ್ ಅಧೀಕ್ಷಕರು,**
**ಬೆಂಗಳೂರು ಜಿಲ್ಲೆ,**
**ಬೆಂಗಳೂರು.**